**ಓ.ಎಸ್. ನಂಃ 568/2022**

**ಪಿ. ಡಬ್ಲ್ಯೂಃ 1**

**ದಿನಾಂಕ 05.03.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರ ಃ ಶ್ರೀಮತಿ ಆರ್.ಹೆಚ್.ಆರ್. ವಕೀಲರಿಂದಃ**

1. ನಾನು ಕೋಡಿಯಾಳ ಗ್ರಾಮದಲ್ಲಿ ವಾಸವಿದ್ದೇನೆ. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿದ್ದು, ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ದಾವಾ ಆಸ್ತಿಗೆ ಪ್ರತಿವಾದಿಯರು ಬಂದು ತೊಂದರೆ ಕೊಟ್ಟ ಕಾರಣ ನಾನು ಈ ದಾವೆಯನ್ನು ಹೂಡಿರುತ್ತೇವೆ. ಪ್ರತಿವಾದಿ ಸಂಖ್ಯೆ 1 ಮತ್ತು 8 ರವರು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ಹೇಳಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ.

2. ದಾವಾ ಆಸ್ತಿಯು ನನ್ನ ತಂದೆಯಾದ ರಾಜಶೇಖರವರಿಗೆ ಮಂಜೂರಾಗಿರುತ್ತದೆ. ನನ್ನ ತಂದೆಯಾದ ರಾಜಶೇಖರವರು ಮರಣ ಹೊಂದಿ 4 ½ ವರ್ಷಗಳಾಗಿರುತ್ತವೆ. ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಆದರೆ ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನನ್ನ ವಕೀಲರು ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ಕೇಳದಿರುವ ಕಾರಣ ನಾನು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

3. ಕೋಡಿಯಾಳ ಗ್ರಾಮದಲ್ಲಿ ನಾನು ವಾಸವಿರುವ ಮನೆಯ ಕಂದಾಯವನ್ನು ನಾನೇ ಕಟ್ಟುತ್ತಿದ್ದೇನೆ. ದಾವಾ ಆಸ್ತಿಯು ಸರ್ವೇ ನಂಬರ್ 115 ರಲ್ಲಿದೆ. ದಾವಾ ಆಸ್ತಿಯು ಕೋಡಿಯಾಳ ಗ್ರಾಮದಲ್ಲಿದೆ. ಸರ್ವೇ ನಂಬರ್ 115 ರ ದಕ್ಷಿಣ ದಿಕ್ಕಿನಲ್ಲಿ ದಾವಾ ನಿವೇಶನ ಇದೆ. ಸರ್ವೇ ನಂಬರ್ 115 ರ ದಕ್ಷಿಣ ದಿಕ್ಕಿನಲ್ಲಿ ದಾವಾ ನಿವೇಶನ ಇದೆ ಎಂದು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ತಂದೆಯವರ ಮರಣದ ನಂತರ ದಾವಾ ಆಸ್ತಿಯನ್ನು ನಮ್ಮ ಹೆಸರಿಗೆ ಪೌತಿ ಖಾತೆ ಮಾಡಿಸಿಕೊಳ್ಳಲು ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಈ ದಾವೆ ಇತ್ಯರ್ಥವಾಗುವವರೆಗೂ ದಾವಾ ಆಸ್ತಿಯನ್ನು ನಮ್ಮ ಹೆಸರಿಗೆ ಪೌತಿ ಖಾತೆ ಮಾಡಿ ಕೊಡುವುದಿಲ್ಲ ಎಂದು ಪಂಚಾಯಿತಿಯವರು ಹೇಳಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ. ಈ ದಾವೆ ಇತ್ಯರ್ಥವಾಗುವವರೆಗೂ

ದಾವಾ ಆಸ್ತಿಯನ್ನು ನಮ್ಮ ಹೆಸರಿಗೆ ಪೌತಿ ಖಾತೆ ಮಾಡಿ ಕೊಡುವುದಿಲ್ಲ ಎಂದು ಪಂಚಾಯಿತಿಯವರು ನಮಗೆ ಹಿಂಬರಹವನ್ನು ನೀಡಿರುವುದಿಲ್ಲ.

4. ದಾವಾ ಆಸ್ತಿಯ ಜಂಜರ್ ನಂಬರ್–17. ದಾವಾ ಆಸ್ತಿಯ ಕಂದಾಯ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವಾದ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂಧಿಗಳ ಒಳಗಡೆ ದಾವಾ ಆಸ್ತಿ ಅಸ್ತಿತ್ವದಲ್ಲಿದೆ ಎಂದು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನಗೆ 1 ಮತ್ತು 8 ನೇ ಪ್ರತಿವಾದಿಯ ಪರಿಚಯವಿದ್ದು, ಅವರು ಸಹ ಕೋಡಿಯಾಳ ಗ್ರಾಮದ ನಿವಾಸಿಗಳಾಗಿರುತ್ತಾರೆ.

5. ಕೋಡಿಯಾಳ ಗ್ರಾಮದ ಸರ್ವೇ ನಂಬರ್ 150 ರಲ್ಲಿ 8 ನೇ ಪ್ರತಿವಾದಿಗೆ ಸೇರಿದ 1 ಎಕರೆ 20 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಮಗೆ ದಾವಾ ಆಸ್ತಿ ಮಂಜೂರು ಆಗದಿದ್ದರು ಹಾಗೂ ದಾವಾ ಆಸ್ತಿ ಅಸ್ತಿತ್ವದಲ್ಲಿಲ್ಲದಿದ್ದರು ಸಹ ನಾನು 4 ನೇ ಪ್ರತಿವಾದಿಯೊಂದಿಗೆ ಶಾಮಿಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ 1 ಮತ್ತು 8 ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

6. ದಾವಾ ಆಸ್ತಿಯ ಸಂಬಂಧ ಎ.ಡಿ.ಎಲ್.ಆರ್ ರವರ ಕಚೇರಿ ಮತ್ತು ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ಪ್ರಕರಣ ನಡೆದಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಆದೇಶಿಸಿ ಸದರಿ ಪ್ರಕರಣಗಳು ಮುಕ್ತಾಯಗೊಂಡಿರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ. ಈ ದಾವೆಯಲ್ಲಿ ಕೇಳಿರುವ ಯಾವುದೇ ಪರಿಹಾರ ಪಡೆಯಲು ನಾವು ಅರ್ಹರಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**